Science therefore poses a serious dilemma. In itself, it is neither good nor bad, the problems are only created by the way it is used. They challenge to scientists today is to bring benefits of science to the less prosperous commuities whilst at the same time safeguarding the natural world. To do this successfully our scientists will need understanding and encouragement of the population as a whole.

The commonwealth, with its many well tried channesl of communication and consultation, is uniquely placed not only to enable member countries to keep abreast of scientific advances, I believe that the commonwealth tradition of quiet co-operation and its advantage of common language can make a special contribution to the practial application of science wherever it is most needed for the sake of human welfare as well as for the long-term health of our planet.

ನಿಯಮ 334ರ ಮೇರೆಗೆ

ಭದ್ರಾವತಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಸ್ಥಾಪನೆಗೆ ಒತ್ತಾಯ

ಶ್ರೀ ಎಸ್. ಇಸಾಮಿಯಾ : ಮಾನ್ಯ ಅಧ್ಯಕ್ಷರೇ, ಭದ್ರಾವತಿಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್‌ಸ್ಟ್ಯಾಂಡ್ ಇಲ್ಲದೆ ಭಾರಿ ತೊಂದರೆಯಾಗಿದೆ. ಭದ್ರಾವತಿ ತಾಲ್ಲೂಕಿನಲ್ಲಿ 6 ಲಕ್ಷ ಜನರಿದ್ದಾರೆ. ಅನೇಕ ವರ್ಷಗಳಿಂದ ಇಲ್ಲೊಂದು ಬಸ್ ಸ್ಟ್ಯಾಂಡ್ ಕಟ್ಟಿಸಿಕೊಡಬೇಕೆಂದು ಕೇಳುತ್ತಾ ಬಂದರೂ, ಈವರೆಗೂ ಆ ಕಾರ್ಯ ಆಗಿಲ್ಲ. ಬಸ್ಸಿನಲ್ಲಿ ಹೋಗುವ ಮತ್ತು ಬರುವ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿರುತ್ತದೆ. ಆದಕಾರಣ, ಆದಷ್ಟು ಶೀಘ್ರ ಭದ್ರಾವತಿಗೆ ಒಂದು ಸರಕಾರಿ ಬಸ್‌ಸ್ಟ್ಯಾಂಡ್ ಕಟ್ಟಿಸಿಕೊಡುವುದು ಅತೀ ಪ್ರಾಮುಖ್ಯವಾಗಿದೆ. ಈ ಕುರಿತು ಸಾರಿಗೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಭದ್ರಾವತಿಯು ಶಿವಮೊಗ್ಗ ಜಿಲ್ಲೆಯ ತಾಲ್ಲೂಕು ಕೇಂದ್ರ. 1981ರ ಜನಗಣತಿಯ ಪ್ರಕಾರ ಈ ಪಟ್ಟಣದ ಜನಸಂಖ್ಯೆ 1,45,000 ಆಗಿರುತ್ತದೆ. ಈ ಪಟ್ಟಣವು ದೊಡ್ಡ ಉದ್ದಿಮೆಗಳ ಔದ್ಯೋಗಿಕ ಕೇಂದ್ರ. ಇಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವಿರುವುದಿಲ್ಲ. ಪುರಸಭೆಯ ಬಸ್ ನಿಲ್ದಾಣವನ್ನು ಖಾಸಗೀ ಬಸ್ ಮಾಲೀಕರೂ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಉಪಯೋಗಿಸುತ್ತಿದೆ. ಸಧ್ಯ ಇಲ್ಲಿ 320 ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳ ಸಂಚಾರವಿರುತ್ತದೆ.

ಇಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣ ನಿರ್ಮಿಸಲು ನಿವೇಶನ ಪಡೆಯಲು 1977ರಿಂದಲೇ ಪ್ರಯತ್ನಿಸುತ್ತಿದೆ. ಪುರಸಭೆಯ ಸಂತೆ ಮೈದಾನ (3 ಎಕರೆ ಹದಿನಾರುವರೆ ಗುಂಟೆ) ವನ್ನು ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಪುರಸಭೆಯ ಈ ಸ್ಥಳಕ್ಕೆ 4 ಲಕ್ಷ ಕ್ರಯ ಬೇಡಿರುವುದರಿಂದ ವಿಷಯವನ್ನು ಕೈಬಿಡಲಾಯಿತು.

ತದನಂತರ, ವಿ.ಐ.ಎಸ್.ಎಲ್ ಸಂಸ್ಥೆಯ ನಿವೇಶನವನ್ನು ಪಡೆಯಲು ಪ್ರಯತ್ನಿಸಲಾಯಿತು. ಈ ನಿವೇಶನದ ಮಧ್ಯದಲ್ಲಿ ಹೆಚ್ಚಿನ ವಿದ್ಯುಚ್ಛಕ್ತಿಯ ತಂತಿಗಳು ಹಾದು ಹೋಗುವುದರಿಂದ ಸೂಕ್ತವಿರುವುದಿಲ್ಲ ಅಂಥ ತೀರ್ಮಾನಿಸಲಾಯಿತು.

ಇತ್ತೀಚೆಗೆ ಸರ್ವೆ ಸಂಖ್ಯೆ 33 ರಲ್ಲಿಯ ನಿವೇಶನವನ್ನು ಪರಿವೀಕ್ಷಿಸಿ ಸೂಕ್ತವೆಂದು ತೀರ್ಮಾನಿಸಲಾಯಿತು. ಭೂಸ್ವಾಧೀನ ಕಾಯ್ದೆ ಪ್ರಕಾರ ಈ 7 ಎಕರೆ 10ಗುಂಟೆ ನಿವೇಶನವನ್ನು ವಶಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಯಿತು. ಭೂಸ್ವಾಧೀನಾಧಿಕಾರಿಗಳು ತಿಳಿಸಿರುವಂತೆ ನಿವೇಶನದ ಅಂದಾಜು ಬೆಲೆ ರೂ.1,25,000ನ್ನು ಸಂದಾಯ ಮಾಡಲಾಗಿದೆ. ನಿವೇಶನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಲ್ಪಟ್ಟ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು .

ದಿನಾಂಕ 1.2.91ರಂದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯಾದಲ್ಲಿ ನಡೆದ ಗಲಭೆಯಲ್ಲಿ ಹಾನಿಗೊಳಗಾದವರಿಗೆ ಪರಿಹಾರ

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ 1-2-91ರಂದು ಕೋಮುಗಲಭೆ ಆಗಿರುತ್ತದೆ. 1-2-91ರಂದು ನಡೆದ ಈ ಕೋಮು ಗಲಭೆಯ ಹಿನ್ನೆಲೆಯೇನು? ಈ ಕೋಮುಗಲಭೆಯಲ್ಲಿ ಆದ ಹಾನಿಯೆಷ್ಟು? ಇದರ ನಿಜವಾದ ಸನ್ನಿವೇಶವೇನು? ಈ ಗಲಭೆಯಲ್ಲಿ ಸರಕಾರ ಕೊಟ್ಟಿರುವ ಪರಿಹಾರ ಎಷ್ಟು? ಈ ಎಲ್ಲಾ ಸವಿವರಗಳನ್ನು ಸಂಪೂರ್ಣವಾಗಿ ಒದಗಿಸಿಕೊಡಬೇಕು. ಈ ಕುರಿತು ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಸ್ತಾವನೆಗೆ ಈ ಕೆಳಕಂಡ ಹೇಳಿಕೆ ನೀಡಬಯಸುತ್ತೇನೆ.

ದಿನಾಂಕ 31-1-1991ರಂದು ರಾತ್ರಿ ಸುಮಾರು 9.50ರ ಸಮಯದಲ್ಲಿ ಪೇಜಾವರ ಸ್ವಾಮಿಜಿಯವರು ಉಡುಪಿಯಿಂದ ಮೈಸೂರಿಗೆ ಹೋಗುತ್ತಿದ್ದಾಗ ಅವರ ಕಾರಿನ ಮುಂದೆ ಸಾಗುತ್ತಿದ್ದ ಒಂದು ಟಿಂಪೊಗೆ ಕೆಲವು ದುಷ್ಕರ್ಮಿಗಳು ವಡವಾಯಿ ಹಳ್ಳಿಯ ಹತ್ತಿರ ಕಲ್ಲು ತೂರಿದ್ದರಿಂದ ಅದರ ಗಾಜು ಒಡೆಯಿತು. ನಂತರ ದಿನಾಂಕ 1-2-1991ರಂದು ಸುಳ್ಯದಲ್ಲಿ ಗಾಂಧಿನಗರದ ಪ್ರಾರ್ಥನ ಮಂದಿರದ ಮುಂದೆ ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ ಒಂದು ಕೋಮಿನವರು ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದರು. ಅದಕ್ಕೆ ಪ್ರತಿಯಾಗಿ ಮೆರವಣಿಗೆಗಾರರು ಪ್ರಾರ್ಥನ ಮಂದಿರದ ಮೇಲೆ ಕಲ್ಲುಗಳನ್ನು ತೂರಿದರಲ್ಲದೆ ಲೂಟಿ, ದೊಂಬಿ ಮುಂತಾದ ಚಟುವಟಿಕೆಗಳಲ್ಲಿ ತೊಡಗಿದರು. ಈ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ ಹಳ್ಳಿಗಳಾದ ಜಲಸೂರು, ಅಲಟ್ಟಿ ಮತ್ತು ಹರ್ಲಂಕಗಳಲ್ಲಿ ಕೆಲವು ಅಲ್ಪಸಂಖ್ಯಾತರ ಅಂಗಡಿಗಳಿಗೆ ಹಾಗೂ ಮನೆಗಳಿಗೆ ಬೆಂಕಿ ಹಚ್ಚಲಾಯಿತು.

ಈ ಗಲಭೆಯಲ್ಲಿ ಒಟ್ಟು ರೂ.1,30,04,495-00 ಗಳಷ್ಟು ಮೌಲ್ಯದ ಆಸ್ತಿಗೆ ನಷ್ಟ ಉಂಟಾಗಿದ್ದು, ಸರ್ಕಾರ ದಿನಾಂಕ 6-2-91ರ ತನ್ನ ಆದೇಶದಲ್ಲಿ ರೂ.25 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ. ಅದರಲ್ಲಿ ರೂ.15 ಲಕ್ಷಗಳನ್ನು ಪರಿಹಾರ ನೀಡಲು ಹಾಗೂ ಉಳಿದ ರೂ.10 ಲಕ್ಷಗಳನ್ನು ಬಡ್ಡಿ ರಹಿತ ಸಾಲ ನೀಡಲು ಅವಕಾಶವಿರುತ್ತದೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ರೂ.15,33,195-00 ಗಳ ಮೊತ್ತದ ಪರಿಹಾರವನ್ನು 164 ಜನರಿಗೆ ನೀಡಿರುತ್ತಾರೆ. ಇನ್ನುಳಿದ ಸಂತ್ರಸ್ಥರಿಗೆ ಪರಿಹಾರ ನೀಡಲೂ ಹಾಗೂ ಹಾನಿಗೊಳಗಾದ ಮಸೀದಿಗಳನ್ನು ದುರಸ್ಥಿಗೊಳಿಸಲು ಸರ್ಕಾರ ದಿನಾಂಕ 8-3-91ರ ಆದೇಶದಲ್ಲಿ ಇನ್ನು 3.0 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ.